ಮೋರೇಶ್ವರಕ್ಕೆ ಬಂದಾಗ ಭಾವೇಶ್ ಒಂದು ಮೂಲೆಯಲ್ಲಿ ಮಾತಿಲ್ಲದೆ ಕುಸಿದು ಕುಳಿತರು. ಅದೆಷ್ಟೋ ಹೊತ್ತು ಕಳೆದಿತ್ತು, ಮೆಲ್ಲನೆ ಭಾವಸಾ ಅವರ ಮಾತುಗಳು ಕಿವಿಯಲ್ಲಿ ಕೇಳಿಸಿದವು. ನೀತಾ ಕಂಪ್ಯೂಟರಿನಲ್ಲಿ ಅದೇ 8 ಮಾರ್ಚ್‌ರಂದು ಭಾವಸಾ ಅವರು ಆಡಿದ ಮಾತುಗಳ ವೀಡಿಯೊ ಹಾಕಿದ್ದರು. ಭಾವಸಾ ತಮ್ಮೊಂದಿಗೆ ಈ ಕ್ಷಣ ಕುಳಿತು ಮಾತನಾಡಿದಂತಿತ್ತು.

ಡಿಸೆಂಬರ್ 3, 2016 ಮತ್ತದೇ ದಿಲ್ಲಿಯ ಮೌಲಾನಾ ಆಜಾದ್ ರಸ್ತೆಯ ವಿಜ್ಞಾನ ಭವನಕ್ಕೆ ಭಾವೇಶ್, ನೀತಾ ಮತ್ತು ಕುಣಾಲ್ ಬಂದಿಳಿದರು. ಮಧ್ಯಾಹ್ನ 1.30ರ ಸಮಯ. ಮೈಕ್‌ನಿಂದ ದನಿ ಘೋಷಿಸಿತು: 'ಈ ಬಾರಿಯ ಸರ್ವಶ್ರೇಷ್ಠ ಉದ್ಯೋಗದಾತ ರಾಷ್ಟ್ರಪತಿ ಪುರಸ್ಕಾರವನ್ನು ಮೋರೇಶ್ವರ ಹಳ್ಳಿಯ ಸನ್‌ರೈಸ್ ಕ್ಯಾಂಡಲ್ಸ್‌ನ ನೀತಾ ಭಾವೇಶ್ ಭಾಟಿಯಾ ಅವರಿಗೆ ನೀಡಲಾಗುತ್ತದೆ'. ಇಡೀ ಭವನದಲ್ಲಿ ಚಪ್ಪಾಳೆಯ ಶಬ್ದ. ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರ ಹಸ್ತದಿಂದ ನೀತಾ, ದಿವ್ಯಾಂಗರ ಸರ್ವಶ್ರೇಷ್ಠ ಉದ್ಯೋಗದಾತರಾಗಿ ಆ ಪುರಸ್ಕಾರವನ್ನು ಪಡೆದಾಗ ಭಾವೇಶ್ ಭಾಟಿಯಾಗೆ ಎಲ್ಲಿಲ್ಲದ ಸಂತಸವಾಗಿತ್ತು. ರಾಷ್ಟ್ರಪತಿಯವರು ಪದಕವನ್ನು ತೊಡಿಸಿ, ಪ್ರಮಾಣ ಪತ್ರವನ್ನು ನೀತಾ ಅವರ ಕೈಗೆ ನೀಡಿದ್ದರು. ಎರಡು ವರ್ಷಗಳ ಹಿಂದೆ, ಇದೇ ಭವನದಲ್ಲಿ, ರಾಷ್ಟ್ರಪತಿಯವರ ಕೈಯಿಂದ ಸರ್ವಶ್ರೇಷ್ಠ ಅಂಧ ಸ್ವಯಂ ಉದ್ಯೋಗಿ ರಾಷ್ಟ್ರೀಯ ಪುರಸ್ಕಾರವನ್ನು ಭಾವೇಶ್ ಭಾಟಿಯಾ ಪಡೆದಿದ್ದರು. ಮೊದಲ ಬಾರಿಗೆ ರಾಷ್ಟ್ರಪತಿ ಪುರಸ್ಕಾರ ಪಡೆದು ಎಷ್ಟು ಸಂತೋಷವಾಗಿತ್ತೋ ಅದರ ಹತ್ತರಷ್ಟು ಇಂದು ಅವರಿಗೆ ನೀತಾ ಪುರಸ್ಕಾರವನ್ನು ಪಡೆಯುವುದನ್ನು ನೋಡಿ ಆನಂದವಾಗಿತ್ತು. ಈ ಪ್ರಶಸ್ತಿ ಪ್ರಕಟವಾದಾಗ ಮೋರೇಶ್ವರ ಹಳ್ಳಿಯಲ್ಲಿ ಮತ್ತೆ ಸಂಭ್ರಮದ ವಾತಾವರಣ, ಸಿಹಿ ಹಂಚಿ ಖುಷಿ ಪಟ್ಟಿದ್ದರು.

ಸನ್‌ರೈಸ್ ಕ್ಯಾಂಡೆಲ್ಸ್‌ನ ಸಿ.ಇ.ಒ. ಭಾವೇಶ್ ಆಗಿದ್ದರೂ, ಅವರು ನೀತಾ ಅವರಿಗೆ ಸ್ಪಷ್ಟವಾಗಿ ಹೇಳಿದ್ದರು, 'ಈ ಪುರಸ್ಕಾರದ ನಿಜವಾದ ಹಕ್ಕುದಾರಳು ನೀನು. ಈ ಪುರಸ್ಕಾರವನ್ನು ವೇದಿಕೆ ಮೇಲೆ ನೀನೇ ಹೋಗಿ ಪಡೆಯಬೇಕು. ಹಾಗಿದ್ದರೆ ಮಾತ್ರ ನಾವು ದಿಲ್ಲಿಗೆ ಹೊರಡೋಣ' ಎಂದು. ಈ ಪುರಸ್ಕಾರ ನಿಜವಾಗಿಯೂ ನೀತಾ ಅವರಿಗೆ ಸಲ್ಲುತ್ತಿತ್ತು. ಐಶ್ವರ್ಯದ ಐಷಾರಾಮದ ಬದುಕನ್ನು ಬದಿಗೆ ಸರಿಸಿ, ಅಂಧರ ಜಗತ್ತನ್ನು ತಮ್ಮದಾಗಿಸಿಕೊಂಡರು. ನಿಸ್ವಾರ್ಥ ಭಾವದಿಂದ ಭಾವೇಶ್ ಅವರ ಜೊತೆಯಲ್ಲಿ ಅಗಣಿತ ಅಂಧರಿಗೆ ಉದ್ಯೋಗದ ಮಾರ್ಗವನ್ನು ತೋರಿಸಿ ಸ್ವಾಭಿಮಾನದಿಂದ ತಮ್ಮ ಕಾಲ ಮೇಲೆ ತಾವು ನಿಲ್ಲುವಂತೆ ಮಾಡಿದ್ದರು. ಸುಮಾರು 58000 ನಾಮಿನೇಶನ್‌ಗಳಲ್ಲಿ ಸನ್‌ರೈಸ್‌ಗೆ ಈ ಪುರಸ್ಕಾರ ಸಿಗುತ್ತಿರುವುದು ಮತ್ತಷ್ಟು ಹೆಮ್ಮೆಯ ವಿಚಾರವಾಗಿತ್ತು. ನೀತಾ ಕಂಪನಿಯ ಉಪಾಧ್ಯಕ್ಷರು.

ಮತ್ತೆ ಮೂರೇ ವರ್ಷಕ್ಕೆ ಈ ಕುಟುಂಬ ವಿಜ್ಞಾನ ಭವನಕ್ಕೆ ಹಿಂತಿರುಗಲಿತ್ತು. ದಿನಾಂಕ 3 ಡಿಸೆಂಬರ್ 2019ರಂದು ಭಾವೇಶ್ ಅವರಿಗೆ ಮಿನಿಸ್ಟ್ರಿ ಆಫ್ ಸೋಷಿಯಲ್ ಜಸ್ಟೀಸ್ ಕಡೆಯಿಂದ ಮೂರನೆಯ ರಾಷ್ಟ್ರೀಯ ಪುರಸ್ಕಾರ ರೋಲ್ ಮಾಡೆಲ್ ಕ್ಯಾಟಗರಿಯಲ್ಲಿ ಲಭಿಸಲಿತ್ತು. ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ 29 ಮೇ 2019ರಂದು ಭಾವೇಶ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಲಿತ್ತು.

* * *

ಇಷ್ಟೆಲ್ಲ ಪ್ರಶಸ್ತಿಗಳ ಸಂಭ್ರಮದಲ್ಲಿಯೂ, ಭಾವೇಶ್ ಅವರಿಗೆ ಅಭಯಹಸ್ತದಂತಿದ್ದ ಭಾವಸಾ ತೀರಿಕೊಂಡ ನೋವು ಇನ್ನೂ ಎದೆಯಲ್ಲಿ ಮಾಸಿರಲಿಲ್ಲ. ಅಷ್ಟರಲ್ಲೇ ದಿನಾಂಕ 27 ಡಿಸೆಂಬರ್ 2017ರಂದು ಕೃಷ್ಣಕಾಂತ್ ಭಾಯಿ ಅವರು ತಮ್ಮ 84ರ ವಯಸ್ಸಿನಲ್ಲಿ ಬದುಕು ಮುಗಿಸಿ ನಡೆದಿದ್ದರು.

ಭಾವೇಶರ ತಂದೆ ತಮ್ಮ ಮಗ ತನ್ನ ಕಾಲುಗಳ ಮೇಲೆ ನಿಂತು, ನೂರಾರು ಅಂಧರಿಗೆ ಸ್ವಾಭಿಮಾನದ ಬದುಕನ್ನು ನೀಡುವುದನ್ನು ನೋಡಿದರು. ಭಾವೇಶ್ ಮತ್ತು ಅವರ ಅಂಧಮಿತ್ರರ ತಂಡ ಪ್ರಗತಿಯ ಹಾದಿಯಲ್ಲಿ ಮುನ್ನಡೆಯುವುದನ್ನು ಕಂಡರು. 'ಎಲ್ಲ ಮಕ್ಕಳು ತಂದೆಯ ಹೆಸರಿಂದ ಗುರುತಿಸಲ್ಪಡುತ್ತಾರೆ. ಆದರೆ ನಾನು ಅತ್ಯಂತ ಅದೃಷ್ಟವಂತ ತಂದೆ, ನನ್ನ ಮಗನ ಹೆಸರಿಂದ ಗುರುತಿಸಲ್ಪಡುತ್ತೇನೆ' ಎಂದು ಹೆಮ್ಮೆಯಿಂದ ಹೇಳುತ್ತಿದ್ದರು. ಮಗ ಮತ್ತು ಸೊಸೆ ರಾಷ್ಟ್ರೀಯ ಪುರಸ್ಕಾರಗಳನ್ನು ಪಡೆಯುವುದನ್ನು ಕಂಡು ಹಿಗ್ಗಿದರು. ಮೊಮ್ಮಗ ಕುಣಾಲ್ ಇಂಜಿನಿಯರಿಂಗ್ ಓದುತ್ತಲೇ ಸನ್‌ರೈಸ್ ಕ್ಯಾಂಡಲ್ಸ್‌ನಲ್ಲಿ ಆಸಕ್ತಿ ವಹಿಸುವುದನ್ನೂ ಕಂಡರು. ವಯಸ್ಸಾದಂತೆ ಹಲವು ಕಾಯಿಲೆಗಳು ಅವರನ್ನು ಆವರಿಸಿದ್ದವು. ತಂದೆ ಮೂತ್ರಪಿಂಡದ ತೊಂದರೆಯಲ್ಲಿಯೇ ಬಹಳಷ್ಟು ವರ್ಷಗಳನ್ನು ಕಳೆದರು. ತಮ್ಮ ಬದುಕಿನ ಪ್ರತಿಯೊಂದು ಹೋರಾಟದಲ್ಲಿಯೂ ತಂದೆಯ ಆಶೀರ್ವಾದದ ಕವಚ ಕುಂಡಲವನ್ನು ಧರಿಸಿ ಹೊರಟಂತೆ ಭಾವೇಶ್ ಅವರಿಗೆ ಭಾಸವಾಗುತ್ತಿತ್ತು. ತಮಗೆ ಸದಾ ಧೈರ್ಯವನ್ನು ಹೇಳಿ ಬೆನ್ನೆಲುಬಾಗಿ ನಿಂತಿದ್ದ ತಂದೆಗೆ 29 ಏಪ್ರಿಲ್ 2019ರ ಮುಂಜಾನೆ, ತಮ್ಮ ರೋಗದೊಡನೆಯ ಯುದ್ಧ ಸಾಕೆನಿಸಿತ್ತು. ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟು ಸಾವಿಗೆ ಶರಣಾದರು. ಆಸ್ಪತ್ರೆಯ ತೀವ್ರ ನಿಗಾ ಕೇಂದ್ರದಲ್ಲಿ ಭಾವೇಶ್, ನೀತಾ ಮತ್ತು ಕುಣಾಲ್ ಅವರು ತಂದೆಯ ಬಗಲಿನಲ್ಲಿ ನಿಂತಿದ್ದರು. ಕಂಪಿಸುವ ಹಸ್ತವನ್ನು ಮಗನ ತಲೆಯ ಮೇಲಿಟ್ಟರು. ಅತ್ಯಂತ ಕಷ್ಟದಿಂದ ನಾಲಿಗೆ ಹೊರಳಿತು. ಅವರು ಅನೇಕ ಬಾರಿ ಹೇಳಿದ್ದ ಮಾತುಗಳನ್ನು ಬದುಕಿನ ಅಂಚಿನಲ್ಲಿಯೂ ಮೆಲ್ಲನೆ ಉಸುರಿದ್ದರು; ಮಗನ ಹೆಸರಿನಿಂದ ಗುರುತಿಸಲ್ಪಟ್ಟ ತಂದೆ ತಾನೆಂಬ ಹೆಮ್ಮೆಯ ನುಡಿಗಳವು. 'ನನ್ನ ಆಶೀರ್ವಾದ ಸದಾ ನಿನ್ನ ಜೊತೆಗಿರುತ್ತದೆ' ಎಂದು ಹೇಳುತ್ತಾ ಹೇಳುತ್ತಾ ಅವರ ಉಸಿರು ಮೇಲೆ



ಮೋರೇಶ್ವರದಲ್ಲಿ ಅಂಧ ಕಾರ್ಮಿಕರಿಗಾಗಿ ಕಟ್ಟಿರುವ ಹಾಸ್ಟೆಲ್




ರೋಲ್ ಮಾಡೆಲ್ ವಿಭಾಗದಲ್ಲಿ ರಾಷ್ಟ್ರಪ್ರಶಸ್ತಿ ಪಡೆಯುತ್ತಿರುವ ಭಾವೇಶ್